

ವಂಚನೆಯ ಅಚ್ಚು ಒತ್ತಿದ. ಒಂದು ದಿನ ತಾನು ಗರ್ಭಿಣಿ ಎಂಬುದನ್ನು ಅವಳು ತಿಳಿಸಿದ ಮೇಲಿಂದ ಅವನು ನಾಪತ್ತೆ. ಚಾಟ್‌ಗೂ ಸಿಗಲಿಲ್ಲ. ಫೋನಿಗೆ ಉತ್ತರಿಸಲಿಲ್ಲ. ಮೆಸೇಜ್ ಬಾಕ್ಸ್ ಖಾಲಿಖಾಲಿ. ನೊಂದ ಯುವತಿ, ಮಡಿವಾಳ ಪೊಲೀಸ್ ಠಾಣೆಗೆ ದೂರು ನೀಡಿದಳು. ಆರೋಪಿಗೆ ಇವಳೇ ಮೊದಲೇನೂ ಆಗಿರಲಿಲ್ಲ. ಆತನ ವಿರುದ್ಧ ಎಫ್ಐಆರ್ ದಾಖಲಾಗಿದೆ. ಆದರೆ ಅವಳ ಮನಸ್ಸಿನ ಮೇಲಿನ ವಂಚನೆಯ ಗಾಯಕ್ಕೆ ಯಾವ ಕಾನೂನಿನಲ್ಲಿ ಔಷಧ ದೊರೆಯಬಹುದು!

## ಮತ್ತೊಂದು ಕಹಿ ಕಥೆ...

ಯಾವುದೊ ಕಹಿ ಗಳಿಗೆ, ಎಂಥದೊ ಕೆಟ್ಟ ಆಲೋಚನೆ, ಏನೊ ಒಂದು ಸಣ್ಣ ಕಾರಣಕ್ಕೆ ಗಂಡ–ಹೆಂಡಿರ ನಡುವೆ ವೈಮನಸ್ಸು ಸಾಮಾನ್ಯ. ಒಬ್ಬರನ್ನೊಬ್ಬರು ಕ್ಷಮಿಸಿ, ರಮಿಸಿ, ಅವರಿಂದುಂಟಾದ ಆ ತಪ್ಪನ್ನು ಮನ್ನಿಸಿದರೆ ಸರಿಹೋಗಬಹುದಾದ ಚಿಕ್ಕ ಅಂತರವದು. ಆದರೆ ಹಾಗೆ ಮುನಿಸಿಕೊಂಡು, ಬೇಸರಗೊಂಡು ಮತ್ತೆ ಒಂದಾಗುವುದರ ಗ್ಯಾಪ್‌ನಲ್ಲೇ ಚಕ್ಕನೆ ನಡುವೆ ನುಸುಳುವ ವಂಚಕರು ಸರಿಹೋಗಬಹುದಾದ, ಮತ್ತೆ ಕೂಡಬಹುದಾದ ಸಂಸಾರಗಳನ್ನು ಶಾಶ್ವತವಾಗಿ ಒಡೆಯುತ್ತಾರೆ. ಇಂಥದ್ದೇ ಒಂದು ಅಹಿತಕರ ಕ್ಷಣದಲ್ಲಿ ಅವಳ ಬಾಳಲ್ಲೂ–ಮನದಲ್ಲೂ ಲಗ್ಗೆ ಇಟ್ಟವನೇ ವಾದಿರಾಜ್.

ಫೇಸ್‌ಬುಕ್‌ನಲ್ಲಿ ಪರಿಚಯವಾದ ವಾದಿ, ಬಹಳ ಬೇಗ ಹತ್ತಿರವಾದ. ಮನದ ಮಾತು ಅರಿತವನಂತೆ ಅವಳ ನೋವು–ಸಂಕಟಗಳನ್ನು ಹೊರಗೆಳೆದು ಸಾಂತ್ವನ ನೀಡಿದ. ‘ಮನವರಿಯದವನೊಂದಿಗೆ ಬಾಳುವುದು ಒಂದು ಶಿಕ್ಷೆಯೇ ಸರಿ’ ಅಂದ. ‘ಜೀವನಪೂರ್ತಿ ನಿನ್ನನ್ನು ಹೂವಿನಂತೆ ನೋಡಿಕೊಳ್ಳುತ್ತೇನೆ’ ಅಂತ ಮಾತುಕೊಟ್ಟ. ಅವಳು ನಂಬಿದಳು. ಅವನೇ ಓಡಾಡಿ ಅವಳಿಗೆ ವಿಚ್ಛೇದನವನ್ನೂ ಕೊಡಿಸಿದ. ‘ನೀನೊಬ್ಬಳು ಜೊತೆಗಿದ್ದರೆ ಸಾಕು, ನನಗೇನೂ ಬೇಡ’ ಅನ್ನುತ್ತಲೇ ಅವಳಿಂದ ಲಕ್ಷಲಕ್ಷ ಹಣ ಕಿತ್ತ. ಊರೂರು ಸುತ್ತಿಸಿದ. ನಂಬಿದ್ದಳಲ್ಲ, ಸಂಶಯ ತಾಳಲಿಲ್ಲ ಅವಳು. ಮಹಿಳೆಯರನ್ನು ವಂಚಿಸಿ ಹಣ ದೋಚಿ ಪರಾರಿಯಾಗುತ್ತಾನೆ ಎಂದು ಯಶವಂತಪುರ ಪೊಲೀಸರು ಬಂಧಿಸಿದ ಮೇಲೆಯೇ ಅವಳಿಗೆ ಅವನೊಬ್ಬ ವಂಚಕನೆಂದು ತಿಳಿದುದು. ಹಣವಂತೂ ಕಳಕೊಂಡಿದ್ದಳು, ಘಾಸಿಗೊಂಡ ಮನಕ್ಕೆ ಹೇಗೆ ಸಮಾಧಾನ ತಂದುಕೊಂಡಾಳು!

## ಉಪಸಂಹಾರ

ಗಂಡುಹೆಣ್ಣಿನ ನಡುವಿನ ಹಲವು ಗೋಡೆಗಳು ಸಾಮಾಜಿಕ ಜಾಲತಾಣಗಳಲ್ಲಿ ಇಲ್ಲವಾಗುತ್ತವೆ. ಅಂತಸ್ತು, ಜಾತಿ, ಬಣ್ಣಗಳಂತಹ ಪೂರ್ವಗ್ರಹಗಳಿಗೆ ಕೂಡ ಸಾಮಾಜಿಕ ಜಾಲತಾಣಗಳಿಂದ ರೂಪುಗೊಳ್ಳುವ ಸಂಬಂಧಗಳು ಉತ್ತರದಂತೆ ಕಾಣಿಸುತ್ತವೆ. ಆದರೆ, ಇಲ್ಲಿಯೂ ವೇಷಧಾರಿ ವ್ಯಕ್ತಿಗಳಿಗೆ ಕೊರತೆಯೇನಿಲ್ಲ. ಸಾವಧಾನ ಹಾಗೂ ವಿವೇಕವನ್ನು ಕಳೆದುಕೊಳ್ಳದಿದ್ದರೆ ಸಜ್ಜನರ ಪೋಷಾಕು ತೊಟ್ಟವರ ನಿಜರೂಪ ತಿಳಿಯುವುದು ಅಸಾಧ್ಯವೇನೂ ಅಲ್ಲ.

ಕಂಡರಿಯದ ವ್ಯಕ್ತಿಯ, ಮೊಬೈಲ್–ಅಥವಾ ಕಂಪ್ಯೂಟರ್‌ನ ಪರದೆಯ ಮೇಲೆ ಅವರು ಕಟ್ಟಿಕೊಟ್ಟ ವ್ಯಕ್ತಿತ್ವದ ಆರಾಧನೆಗೆ ತೊಡಗುವುದು ಸಹಜವೇನಲ್ಲ. ಅವರ ಬಗ್ಗೆ ನಂಬಿದ ಸಂಗತಿಗಳು ಭ್ರಮೆಗಳೋ ವಾಸ್ತವವೋ ಸ್ಪಷ್ಟವಾಗುವುದು ಅವರನ್ನು ಕಂಡು–ಅರಿಯಲು ಆರಂಭಿಸಿದ ಮೇಲೆಯೇ. ಒಂದಂತೂ ನಿಜ – ಪ್ರೇಮ ಎನ್ನುವುದೊಂದು ನಂಬಿಕೆ; ಡಿಜಿಟಲ್ ಜಗತ್ತಿನಲ್ಲಾದರೂ ಅಷ್ಟೇ, ಕುಟುಂಬದೊಳಗಾದರೂ ಅಷ್ಟೇ. ಡಿಜಿಟಲ್ ಕೊಂಡಿಗಳು ಮನಸ್ಸುಗಳ ನಡುವೆ ಕೊಂಡಿಗಳನ್ನಷ್ಟೇ ಕಲ್ಪಿಸಬಹುದು. ಆ ಕೊಂಡಿಗಳನ್ನು ಬಲಪಡಿಸುವುದು ಅಥವಾ ಕತ್ತರಿಸುವುದು ನಮ್ಮ ತಿಳಿವಳಿಕೆಗೆ ಬಿಟ್ಟಿದ್ದು.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in